ಸಾಕಾಗಿ ಹೋಗಿದೆ' ಕಟುವಾಗಿ ಹೇಳಿದಳು ಶೀಲಾ. ಭಾರ್ಗವ ಚಕಿತನಾದ.

'ಏನೂಂತ ಮಾತಾಡ್ತಿದೀಯೇ? ಅಕ್ಕ ಇದಾಳೋ, ಇಲ್ವೋ ಅದೂ ಗೊತ್ತಿಲ್ಲ. ಇದಾಳೆ ಅಂದ್ಕೋ, ಎಲ್ಲಿದಾಳೆ ಅಂತ ಹುಡುಕೋಕಾಗುತ್ತೆ? ನೀನೂ ಅಪ್ಪನ ಥರ ಹುಚ್ಚುಚ್ಚಾಗಿ ಮಾತಾಡ್ಬೇಡ.'

'ನನ್ನ ತಲೆ ಸರಿಯಾಗೇ ಉಂಟು. ವಿಷಯ ಹೀಗ್ಹೀಗೆ ಅಂತ ಅವಳಿಗೆ ಫೋನ್ ಮಾಡಿ. ಅವಳ ಜವಾಬ್ದಾರಿ ನೆನಪು ಮಾಡ್ಕೊಡಿ. ಅವಳು ಬರ್ದಿದ್ರೆ ನಾವೇ ಹೋಗಿ ಮಾವನ್ನ ಅಲ್ಲಿ ಬಿಟ್ಬರೋಣ.'

'ಏಯ್, ಏನಾಗಿದ್ಯೇ ನಿಂಗೆ? ಅಕ್ಕನ ಅಡ್ರೆಸ್ ನಾಲಿಗೆ ತುದೀಲುಂಟು ಅನ್ನೋ ಹಾಗೆ ಮಾತಾಡ್ತಿ'.

'ಎಲ್ಲಾ ಹೇಳ್ತೀನಿ. ನೀವು ಬೈಬಾರ್ದು ನನ್ನ. ತಪ್ಪು ತಿಳ್ಕೋಬಾರ್ದು'.

'ಅಂಥಾ ಕೆಲಸ ಏನಾದ್ರೂ ಮಾಡಿದೀಯಾ?' ಕರ್ಕಶವಾಯ್ತು ಭಾರ್ಗವನ ದನಿ. ಶೀಲಾಳ ಕಂಗಳಲ್ಲಿ ನೀರಿಳಿಯಿತು.

'ಪ್ಲೀಸ್ ಕಣ್ರೀ, ಬೈಬೇಡಿ ನನ್ನ. ಒಳ್ಳೇ ಉದ್ದೇಶದಿಂದ್ಲೇ ನಾನು ಮಾಡಿದ್ದು'.

'ಅದೇನೂಂತ ಮೊದಲು ಹೇಳು...'

ಶೀಲಾ ಮೇಲೇಳುತ್ತಿದ್ದಂತೆ ಭಾರ್ಗವನೂ ಅವಳ ಹಿಂದೆ ಹಿಂದೆ ಹೋದ. ತನ್ನ ಸೀರೆ, ಬಟ್ಟೆಗಳನ್ನಿಟ್ಟುಕೊಳ್ಳುತ್ತಿದ್ದ ಬೀರುವಿನ ಬೀಗದ ಕೈ ತಿರುಗಿಸಿ ಬಾಗಿಲು ತೆಗೆದಳು ಶೀಲಾ. ಒಪ್ಪವಾಗಿ ಜೋಡಿಸಿಟ್ಟಿದ್ದ ತನ್ನ ರೇಷ್ಮೆಸೀರೆಗಳ ಬುಡದಲ್ಲಿದ್ದ ಸೀರೆಯನ್ನು ಎಳೆದು ತೆಗೆದಳು. ಅದರ ಮಡಿಕೆಯೊಳಗೆ ಅಡಗಿತ್ತು ಒಂದು ಪ್ಲಾಸ್ಟಿಕ್ ಕವರು. ಮತ್ತು ಕವರಿನ ಒಳಭಾಗದಲ್ಲಿ ಕೆಲವು ಇನ್‌ಲ್ಯಾಂಡ್ ಲೆಟರ್‌ಗಳು. ಎಲ್ಲವನ್ನೂ ತೆಗೆದು ಭಾರ್ಗವನ ಕೈಗೆ ಕೊಟ್ಟಳು ಶೀಲಾ. ಕಂಪಿಸುವ ಕೈಗಳಿಂದ ಭಾರ್ಗವ ಅವನ್ನು ತೆಗೆದುಕೊಂಡ. ಇಂದ... ವಿಳಾಸದ ಮೇಲೆ ಕಣ್ಣಾಡಿಸುತ್ತಿದ್ದಂತೆ ಅವನ ಕಂಠ ಉಬ್ಬಿ ಬಂತು. 'ಅಕ್ಕಾ..., ಅಕ್ಕಾ...' ಎನ್ನುತ್ತಾ ಗದ್ಗದಿಸಿದ ಭಾರ್ಗವ.

'ತಪ್ಪಾಯ್ತು ಕಣ್ರೀ. ನಿಮ್ಮಿಂದ ಎಲ್ಲಾ ಮುಚ್ಚಿಡ್ಬಾರ್ದಿತ್ತು ನಾನು. ಅಕ್ಕ ಅಂದ್ರೆ ನಿಮಗೆ ಪಂಚಪ್ರಾಣ ಅಂತ ನಂಗೆ ಗೊತ್ತಿತ್ತು...'

'ಗೊತ್ತಿದ್ದೂ ಮೋಸ ಮಾಡಿದ್ಯಾ?'

'ಮೋಸ ಅನ್ಬೇಡಿ, ಮುಂದಾಲೋಚನೆ ಅನ್ನಿ. ಸ್ವಲ್ಪ ನಿಧಾನಕ್ಕೆ ಯೋಚನೆ ಮಾಡ್ಬೇಕು ನೀವು. ಆವೇಶ ಪಡ್ಬಾರ್ದು. ಅತ್ತಿಗೆ ಇಲ್ಲಿಗೆ ಬಂದು ಹೋಗಿ ಮಾಡ್ತಿದ್ರೆ ಮಾವ ಅವರನ್ನ ಕ್ಷಮಿಸ್ತಿದ್ರು ಅಂದ್ಕೊಳ್ಳಿ...'

'ಅಪ್ಪನ್ನ ಹಾಗೆ ನಾನೇ ಒಪ್ಪಿಸ್ತಿದ್ದೆ ಕಣೇ'.

'ಅದೇ, ಅದೇ, ಅದಕ್ಕೇಂತ್ಲೇ ನಿಮಗೆ ಬುದ್ಧಿ ಕಮ್ಮಿ ಅನ್ನೋದು ನಾನು'.

'.....'

'ಆಸ್ತೀನ ಸಮಾ ಎರಡು ಭಾಗ ಮಾಡಿಡ್ತಿದ್ರು ಮಾವ. ನಿಮ್ಮ ಸಂಪಾದನೇಲಿ ಬದುಕಲು ಮಾಡೋಕೆ ಸಾಧ್ಯಾನಾ ಅಂತ ಯೋಚನೆ ಮಾಡಿದೀರಾ? ನಾಳೆ ಮಗನ ಗತಿ ಏನು? ಅವನನ್ನೂ ನಿಮ್ಮ ಹಾಗೆ ಮಾಡಿಡೋಕೆ ಬರುತ್ತಾ? ಒಂದೊಳ್ಳೇ ಓದು ಓದಿಸ್ಬೇಕೂಂದ್ರೆ ಎಲ್ಲಿಗೆ ಕದಿಯೋಕೆ ಹೋಗ್ಬೇಕಿತ್ತು?'

'ಭಾಳ ಆಳದ ನೀರಿಗೆ ಇಳಿದಿದ್ದಿ...' ಅಂದ ಭಾರ್ಗವ. ಮಡದಿಯ ಮಾತಿನಲ್ಲಿ ಬದುಕಿನ ವಾಸ್ತವ ಗೋಚರಿಸುತ್ತಾ ಅವನ ಬುದ್ಧಿ ಅದೇ ದಿಕ್ಕಿನಲ್ಲಿ ಕೆಲಸ ಮಾಡತೊಡಗಿತ್ತು. ಆದರೂ ಬಾಯಿಂದ ಸಹಾನುಭೂತಿಯ ಮಾತು ಹೊರಬಿತ್ತು.

'ಪಾಪ, ಅಕ್ಕನ ಹಣಕಾಸಿನ ಸ್ಥಿತಿ ಹೇಗುಂಟೋ? ಅದನ್ನೂ ಯೋಚನೆ ಮಾಡ್ಬೇಕಲ್ವಾ?'

'ಊರ ಉಸಾಬರಿ ಬೇಡ ನಮಗೆ. ನಮ್ಮ ಕಾಲಬುಡ ನಾವು ನೋಡ್ಕೊಂಡು ನಡೆಯೋಣ'.

ಇದಕ್ಕೇ, ಇದಕ್ಕೇ, ಈ ಶಕುನಿ ಬುದ್ಧಿಯಿಂದಲೇ ಅಪ್ಪನಿಗೆ ಬೆಣ್ಣೆ ಹಚ್ಚುತ್ತಾ ಅವನನ್ನು ತುದಿಬೆರಳಲ್ಲಿ ಕುಣಿಸಿ ತಮ್ಮಂತೆ ಮಾಡಿಕೊಂಡಿದ್ದಾ? ಮೊದಲ ಪತ್ರದ ತಾರೀಕು ಗಮನಿಸಿದರೆ ಇವರ ಮದುವೆಯಾದ ಕೆಲವೇ ತಿಂಗಳಲ್ಲಿ ಬಂದಿದೆ ಮೊದಲ ಪತ್ರ. ಕೋಲಾರದ ಹತ್ತಿರ ಒಂದು ಹಳ್ಳಿಯಲ್ಲಿ ನೆಲೆ ಕಂಡುಕೊಂಡಿದ್ದಾಳೆ ಅಕ್ಕ.

'ಜೀವನದಲ್ಲಿ ಒಂದು ಗಟ್ಟಿ ಆಧಾರ ಕಂಡುಕೊಳ್ಳದೆ ನಿಮ್ಮನ್ನ ನೋಡಬಾರ್ದು ಅಂತ ನನಗೆ ನಾನೇ ಬೇಲಿ ಹಾಕ್ಕೊಂಡಿದ್ದೆ ಅಪ್ಪಾ. ಅದರಂತೆ ನಡ್ಕೊಂಡಿದೀನಿ. ಆಳ ಗೊತ್ತಾಗೋದು ನೀರಿಗೆ ಇಳಿದ ಮೇಲೆ ಅಂದಿದ್ರಿ ನೀವು. ಮುಳುಗುವಷ್ಟೇನಿಲ್ಲ ಆಳ. ಈಗ ತಲೆ ಎತ್ತಿ ನಿಮ್ಮ ಮುಂದೆ ನಿಲ್ಲುವಷ್ಟು ಧೈರ್ಯ ಬಂದಿದೆ. ನಿನ್ನನ್ನ, ಭಾರ್ಗವನನ್ನ ನೋಡ್ಬೇಕು ಅಂತ ತುಂಬಾ ಅನ್ನಿಸ್ತಿದೆ. ನಿನ್ನ ಮೊಮ್ಮಗಳನ್ನ ಕರ್ಕೊಂಡು ಒಂದು ಸಲ ಬರ್ಲಾ ಅಪ್ಪ? ಅಥವಾ ನೀನೇ ಬಂದ್ರೂ ಸರಿ. ತುಂಬಾ ಸಂತೋಷವಾಗುತ್ತೆ. ಮನೆಗೆ ಫೋನ್ ಮಾಡಿದ್ರೆ ಅದು ಕೆಲಸ ಮಾಡ್ತಿಲ್ಲ. ಲ್ಯಾಂಡ್ ಲೈನ್ ತೆಗೆಸಿ ಮೊಬೈಲ್ ಇಟ್ಕೊಂಡಿರ್ಬೇಕು, ಅಲ್ವಾ? ನನ್ನ ಮೊಬೈಲ್ ನಂಬರನ್ನೂ ಕಳಿಸ್ತಿದೀನಿ. ಫೋನ್ ಮಾಡು, ಪ್ಲೀಸ್...'

ಹೀಗೆ ಮುಂದುವರಿದು ಲೋಕಾಭಿರಾಮದೊಂದಿಗೆ ಮುಕ್ತಾಯವಾಗಿದ್ದ ಪತ್ರ. ತಿಂಗಳ ನಂತರ ಮತ್ತೊಂದು. ಆಮೇಲೆ ಮಗದೊಂದು. 'ನಿಮ್ಮ ಮಗಳನ್ನು ಕ್ಷಮಿಸೋದಿಲ್ವಾ ಅಪ್ಪ? ಅಷ್ಟೊಂದು ದೊಡ್ಡ ತಪ್ಪು ನಾನು ಮಾಡಿದೀನಿ ಅಂತ ಈಗಲೂ ಅನಿಸುತ್ತಾ? ಕ್ಷಮಿಸಿದೀನಿ ಅಂತ ಒಂದು ಮಾತು ಹೇಳು. ಆ ಕ್ಷಣ ಹಾರಿಕೊಂಡು ಬರ್ತೀನಿ. ಇಲ್ಲದಿದ್ರೆ ನನಗೂ ಉಂಟು ಸ್ವಾಭಿಮಾನ. ನನಗೂ ಉಂಟು ನನ್ನ ಬದುಕು. ನನ್ನ ಮುಖ ನೋಡಬಾರ್ದು ಅಂತ ನೀವೆಲ್ಲಾ ಶಪಥ ಮಾಡ್ಕೊಂಡಿದ್ರೆ ಹಾಗೇ ಆಗ್ಲಿ...'

ಮೂರಕ್ಕೆ ಮುಕ್ತಾಯ ಅನ್ನುವಂತೆ ಅಲ್ಲಿಗೆ ನಿಂತು ಹೋಗಿತ್ತು ಪತ್ರ ಸಂದೇಶ. ಸ್ವಾಭಿಮಾನವೋ, ದುರಭಿಮಾನವೋ ಮೇಲುಗೈಯಾಗಿತ್ತು.

'ನನ್ನ ತಲೆ ಕೆಟ್ಟು ಮೊಸರಾಗ್ತಿದೆ. ನಮ್ಮ ಮದುವೆ ಆದ ಮೇಲೆ ಅವಳಿಗೆ ಕಾಗದ ಬರೆಯೋ ಪ್ರೇರೇಪಣೆ ಆಗಿದ್ದು ಯಾಕೆ? ಕಾಗದ ಅಪ್ಪನ ಕೈಗೆ ಸಿಗದೆ ನಿನಗೇ ಸಿಕ್ಕಿದ್ದು ಹೇಗೆ? ವಿಚಿತ್ರ ಅನ್ನಿಸ್ತಿದೆ.'

ವಿಚಿತ್ರ ಏನಿರಲಿಲ್ಲ. ಗೇಟಿಗೆ ಹೊಂದಿಸಿಟ್ಟಿದ್ದ ಪೋಸ್ಟ್ ಬಾಕ್ಸಿನ ಬೀಗ ತೆಗೆದು ಪತ್ರಗಳೇನಾದರೂ ಇದ್ದರೆ ಒಳಗೆ ತರುವ ಕೆಲಸ ಸ್ವತಾ ವಹಿಸಿಕೊಂಡಿದ್ದಳು ಶೀಲಾ, ಆ ಮನೆಯ ಯಜಮಾನಿಯಾದ ಮೇಲೆ. ಬರುತ್ತಿದ್ದುದೆಲ್ಲಾ ಚಂದಾ ಕಟ್ಟಿ ಚಿದಾನಂದ ತರಿಸಿಕೊಳ್ಳುತ್ತಿದ್ದ ಯಾವ್ಯಾವುದೋ ಆಧ್ಯಾತ್ಮಿಕ ಪತ್ರಿಕೆಗಳು, ಪರಿಚಿತ ವಲಯದವರ ಮದುವೆ ಪತ್ರಿಕೆಗಳು, ಜಾಹೀರಾತಿನ ಕಾಗದಗಳು ಇಂಥವೇ. ಇಂಥವುಗಳ ನಡುವೆ ಇನ್‌ಲ್ಯಾಂಡ್ ಲೆಟರ್ ನೋಡಿ ಶೀಲಾ ಜಾಗೃತಳಾಗಿದ್ದಳು. ಕಾಗದ ಒಡೆದು ಓದಿ ಮುಚ್ಚಿಟ್ಟಿದ್ದಳು. ಚಿದಾನಂದ ಸ್ವತಾ ಪೋಸ್ಟ್ ಬಾಕ್ಸ್ ನೋಡಲು ಹೋಗದಂತೆ ಕೀಯನ್ನು ತನ್ನ ಸುಪರ್ದಿನಲ್ಲಿ ಜೋಪಾನವಾಗಿಟ್ಟುಕೊಂಡಿದ್ದಳು.

'ಹೆಂಗಸರ ಬಾಯಲ್ಲಿ ಗುಟ್ಟು ನಿಲ್ಲಲ್ಲ ಅಂತಾರೆ. ಧರ್ಮರಾಯ ಶಾಪ ಕೊಟ್ಟಿದ್ದೋ, ಎಂಥದ್ದೋ ಕತೆಯಿದೆಯಂತಲ್ಲ? ಇಷ್ಟು ದೊಡ್ಡ ಗುಟ್ಟನ್ನು ಇಷ್ಟು ವರ್ಷ ಮುಚ್ಚಿಟ್ಕೊಂಡಿದ್ದೆಯಲ್ಲೇ, ಅಬ್ಬಾ...' ಉದ್ಗರಿಸಿದ್ದ ಭಾರ್ಗವ. ಸರಿ, ತಪ್ಪುಗಳ ತಾಕಲಾಟದಲ್ಲಿ ಮಡದಿಯ ಕಡೆ ವಾಲುತ್ತಿತ್ತು ಚಿತ್ತ. 'ಎಲ್ಲಕ್ಕಿಂತ ಬದುಕು ಮುಖ್ಯ' ಅನ್ನುತ್ತಿತ್ತು ಸ್ವಾರ್ಥ. ತಲೆಯೆತ್ತಿ ನಿಮ್ಮ ಮುಂದೆ ನಿಲ್ಲುವಷ್ಟು ಧೈರ್ಯ ಬಂದಿದೆ ಎಂದು ಹೇಳಿಕೊಂಡಿದ್ದಾಳೆಂದ ಮೇಲೆ ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಾಳೆ ಎಂದರ್ಥ.

ದುಡ್ಡಿನ ಅಗತ್ಯ ಅವಳಿಗಿಂತ ಹೆಚ್ಚು ತಮಗಿರುವುದಾದರೆ ಆಸ್ತಿಯಲ್ಲಿ ಪಾಲು ಯಾಕೆ? ಎಲ್ಲಾ ಮಕ್ಕಳಿಗೂ ಸಮಪಾಲು ಅನ್ನುವುದೇ ಸರಿಯಾದ್ದಲ್ಲ ಅನಿಸುತ್ತಿದೆ ಭಾರ್ಗವನಿಗೆ. ಕಷ್ಟದಲ್ಲಿರುವವರಿಗೆ ಬೇಕು ಹೆಚ್ಚಿನ ನೆರವು. ಹೆಚ್ಚಿನ ಅಗತ್ಯ.

'ಫೋನ್ ಮಾಡಿ ನೋಡ್ರೀ. ನಂಬರ್ ಕೊಟ್ಟಿದಾರಲ್ಲ ನಿಮ್ಮಕ್ಕ? ಹೋದರೆ ಒಂದು ಕಲ್ಲು, ಬಿದ್ದರೆ ಒಂದು ಹಕ್ಕಿ.'

'ಅನ್ಯಾಯ ಅಲ್ವಾ? ಆಸ್ತೀನೆಲ್ಲಾ ಹೊಡ್ಕೊಂಡು ಈಗ ಅವಳನ್ನ ನೆನೆಸ್ಕೊಳ್ಳೋದಾ?'

'ಅದೆಲ್ಲಾ ಪುರಾಣ ಅವಳಿಗೆ ಗೊತ್ತಿಲ್ವಲ್ಲ? ನೀವು ಕಿವಿ ಕಚ್ಕೋಕೆ ಹೋಗ್ಬೇಡಿ. ಇದರಲ್ಲಿ ಅನ್ಯಾಯ ಏನುಂಟು? ಆಸ್ತಿ ಇದ್ದು ಪಾಲು ಕೊಟ್ರೆ ಮಾತ್ರ ಅಪ್ಪ, ಇಲ್ಲದಿದ್ರೆ ಇಲ್ಲ ಅಂತಾನಾ? ನಮ್ಮಪ್ಪಂಗೆ ಹೀಗೇನಾದ್ರೂ ಆದ್ರೆ ಬಿಟ್ಹಾಕ್ತೀವಾ ನಾವು? ನಮ್ಮ ಕರ್ತವ್ಯ ಮಾಡ್ತೀವಪ್ಪಾ...'

'ಇಷ್ಟು ವರ್ಷ ಯಾಕೆ ಫೋನ್ ಮಾಡ್ಲಿಲ್ಲ, ಕರೀಲಿಲ್ಲ ಅಂತ ಕೇಳಿದ್ರೆ ಏನು ಹೇಳ್ಲಿ?'

'ಅಯ್ಯೋ ಪೆದ್ದೆ, ನೀನು ಕಾಗದ ಬರ್ದಿದ್ದನ್ನು ಅಪ್ಪ ನಮಗೆ ಹೇಳೇ ಇರ್ಲಿಲ್ಲ ಅಂದ್ರಾಯ್ತು. ಅವ್ರು ಮುಚ್ಚಿಟ್ಟಿದ್ದು ಅಕಸ್ಮಾತ್ ಇವತ್ತು ಕೈಗೆ ಸಿಕ್ತು ಅಂದ್ರಾಯ್ತು. ಇದನ್ನೂ ಹೇಳ್ಕೊಡ್ಬೇಕಾ ನಿಮ್ಗೆ? ನಂಬೋದು, ಬಿಡೋದು ಅವಳಿಗೆ ಬಿಟ್ಟಿದ್ದು...'

'ಒಂಥರಾ ಆಗುತ್ತೆ ಕಣೇ...'

'ಯಾವ ಥರಾನೂ ಇಲ್ಲ. ಅಪ್ಪಂಗೆ ಹಿಂಗ್ಹಿಂಗಾಗಿದೆ ಅಂತ ಎಲ್ಲಾ ಹೇಳಿ. ಕರುಳು ಚುರ್ ಅನ್ಬೋದು'

ಹೂಂಗುಟ್ಟಿದ ಭಾರ್ಗವ.

(ಸಶೇಷ)